ನಂ.ಎಸ್‌ಡಿಎಸ್/ಎಚ್‌ಆಯ್‌ಟಿ/ಎಸ್ಟಾ/ /2018–19

ಪ್ರಾಂಶುಪಾಲರ ಕಾರ್ಯಾಲಯ,
ಎಚ್.ಆಯ್.ಟಿ. ನಿಡಸೋಸಿ
ದಿನಾಂಕ: 21–01–2019

# ಸುತ್ತೋಲೆ

ಈ ಮೂಲಕ ಎಲ್ಲ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ ತುಮಕೂರಿನ ಸಿದ್ಧಗಂಗಾಮಠದ ತ್ರಿವಿಧ ದಾಸೋಹಿ, ನಡೆದಾಡುವ ದೇವರು, ಡಾ॥ ಶ್ರೀ ಶಿವಕುಮಾರ ಸ್ವಾಮೀಜಿಯವರು ಇಂದು ಮುಂಜಾನೆ 11.44 ಗಂಟೆಗೆ ಶಿವೈಕ್ಯರಾಗಿದ್ದಾರೆಂದು ತಿಳಿಸಲು ತುಂಬಾ ವಿಷಾಧನೀಯವೆನಿಸುತ್ತದೆ. ಶಿವೈಕ್ಯರಾಗಿರುವ ಶ್ರೀಗಳ ಆತ್ಮಕ್ಕೆ ಶಾಂತಿ ಕೋರಲು ದಿನಾಂಕ: 22–01–2019 ರಂದು ಮುಂಜಾನೆ 11.00 ಗಂಟೆಗೆ ಮೆಕ್ಯಾನಿಕಲ್ ಸೆಮಿನಾರ ಹಾಲದಲ್ಲಿ ಸಭೆ ಕರೆಯಲಾಗಿದೆ. ಎಲ್ಲ ಉಪನ್ಯಾಸಕರು ತಮ್ಮ ತಮ್ಮ ತರಗತಿಗಳಲ್ಲಿ ಶ್ರೀಗಳ ಜೀವನ ಆದರ್ಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕೆಂದು ಮತ್ತು ಸದರಿ ಸಭೆಗೆ ಎಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ. ಸದರಿ ಸಭೆಯಲ್ಲಿ ಶ್ರೀಗಳ ಮೌಲ್ಯಿಕ ಜೀವನದ ಕುರಿತು ಮಾತನಾಡುವವರಿಗೆ ಅವಕಾಶವಿರುತ್ತದೆಂದು ಈ ಮೂಲಕ ತಿಳಿಸಲಾಗಿದೆ.

21/1

ಡಾ॥ ಎಸ್. ಸಿ. ಕಮತೆ
ಪ್ರಾಂಶುಪಾಲರು